ಬ್ಯಾಂಕ್‌ಗಳು ಕೂಡ ಅಲ್ಲಿಗೆ ಬಂದು ಫಲಾನುಭವಿಗಳ ಹೆಸರಿನಲ್ಲಿ ಕೊಡುತ್ತಾರೆ. ಎರಡನೆ ವಿಚಾರ ಏನೆಂದರೆ, ಈಗ ನಮ್ಮ ಮನೆ ನಮ್ಮ ಸ್ವತ್ತು ಎಂಬ ಕಾರ್ಯಕ್ರಮ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದು, ಸಾವಿರಾರು ಕೋಟಿ ರೂಪಾಯಿಗಳಷ್ಟು ಬಡ್ಡಿ ಜಾಸ್ತಿಯಾಗಿದ್ದರಿಂದ ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಬಜೆಟ್‌ನಲ್ಲಿ ಹೇಳಿದ್ದಾರೆ. ಇನ್ನು 15–20 ದಿವಸಗಳಲ್ಲಿ ಎಲ್ಲಾ ಬ್ಯಾಂಕ್‌ಗಳು ಹಣವನ್ನು ಬಿಡುಗಡೆ ಮಾಡತಕ್ಕಂಥದ್ದಕ್ಕೆ ನಾವೊಂದು ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಈ ಸದನ ಮುಗಿಯುವುದಕ್ಕಿಂತ ಮುಂಚಿತವಾಗಿಯೇ ಪ್ರತಿಯೊಂದು ಕ್ಷೇತ್ರಕ್ಕೂ ಕೂಡ ಅದರ ಬಗ್ಗೆ ಸೂಚನೆ ನೀಡುವಂಥ ಕೆಲಸವನ್ನು ಮಾಡುತ್ತೇವೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:**

**ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ದಿನಾಂಕ 01.03.2011ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 46 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:** ಮಂಡಿಸಲಾಯಿತು. (ಅನುಬಂಧ–1)

– – – –

**ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ:** ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತಾರೆ, ಅದು ಯಾವ ಇಲಾಖೆಗೆ ಹಸ್ತಾಂತರವಾಗಿದೆ.

**ಅಧ್ಯಕ್ಷರು:** ಆಗಲೇ ಹೇಳಿದೆ. ನಿಮ್ಮ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.

**ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ:** ಉತ್ತರ ಯಾವಾಗ ಕೊಡುತ್ತಾರೆ.

**ಅಧ್ಯಕ್ಷರು:** ಮುಂದಿನ ಸೋಮವಾರ ಉತ್ತರವನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ತಮಗೆ ಆಗಲೇ ಹೇಳಿದೆ.

**2. ವರದಿಗಳನ್ನೊಪ್ಪಿಸುವುದು**

**ಶ್ರೀ ಎಂ.ಕೆ. ಪಟ್ಟಣಶೆಟ್ಟಿ ಇವರ ಪರವಾಗಿ ಶ್ರೀ 1ಸಿದ್ದು ಸವದಿ (ತೇರದಾಳ):** ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಿಸಿದ 122ನೇ ವರದಿ ಹಾಗೂ ಕರ್ನಾಟಕ ರಾಜ್ಯ

ಪಾನೀಯ ನಿಗಮ ನಿಯಮಿತಕ್ಕೆ ಸಂಬಂಧಿಸಿದ 123ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಅಧ್ಯಕ್ಷರು:** ವರದಿಯನ್ನು ಮಂಡಿಸಲಾಯಿತು.

**3. ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ವಿಷಯ:** ದಿನಾಂಕ 13.02.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿ 80–85 ಲಕ್ಷ ರೂಪಾಯಿಗಳು ನಷ್ಟವಾಗಿದ್ದು ಅವರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ.

**ಶ್ರೀ ಆರ್. ನರೇಂದ್ರ (ಹನೂರು):** ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು 13.2.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿ ದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿವೆ. ಸುಮಾರು 80–85 ಲಕ್ಷ ರೂ.ಗಳು ಲಾಸ್ ಆಗಿದೆ. ಒಂದು ನೋವಿನ ಸಂಗತಿ ಏನೆಂದರೆ, 42 ಅಂಗಡಿಗಳು ಅಗ್ನಿ ದುರಂತ ಆಗಿ ಅವರ ಕುಟುಂಬದವರು ಬೀದಿಯಲ್ಲಿ ಕುಳಿತಾಗ ಜಿಲ್ಲಾಡಳಿತದವರು ಒಬ್ಬರೂ ಬಂದು ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳಾದ ಬಟ್ಟೆ–ಬರೆ ಅಥವಾ 4 ದಿವಸ ಊಟಕ್ಕೆ ಏನು ನೋಡಲಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ಆ 42 ಅಂಗಡಿಗಳವರು 80–85 ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪುನರ್ ವಸತಿ ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):** ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ವರದಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡಿರುತ್ತೇನೆ. ಕೊಳ್ಳೆಗಾಲ ತಾಲ್ಲೂಕು ರಾಂಪುರ ಹೋಬಳಿ ಮಹದೇಶ್ವರ ಬೆಟ್ಟಕ್ಕೆ ಸೇರಿದಂಥ 42 ಅಂಗಡಿಗಳಿಗೆ ದಿನಾಂಕ: 13.2.2011ರಂದು ಆಕಸ್ಮಿಕವಾಗಿ ಅಗ್ನಿ ದುರಂತದಿಂದ ನಾಶವಾಗಿದೆ. ಪರಿಹಾರವನ್ನು ಕೇಳಿದ್ದಾರೆ. ಈ ರೀತಿ ಬೆಂಕಿ ಆಕಸ್ಮಿಕವಾಗಿ ಬಿದ್ದಾಗ ಪರಿಹಾರ ಕೊಡುವಂಥದ್ದು ಸಾಮಾನ್ಯವಾಗಿ ಇಲ್ಲ. ಆದರೆ ಇದು ವಿಶೇಷವಾದ ಸಂದರ್ಭವೆಂದು ಪರಿಗಣಿಸಿ ಈ 42 ಜನರಿಗೆ ತಕ್ಷಣ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಒಬ್ಬೊಬ್ಬರಿಗೆ 25,000 ರೂ.ಗಳನ್ನು ತಕ್ಷಣ ತಾತ್ಕಾಲಿಕವಾಗಿ ಪರಿಹಾರ ಕೊಡಬೇಕೆಂದು ಸೂಚನೆ ಕೊಟ್ಟು ಹಣವನ್ನು ತಲುಪಿಸುತ್ತೇನೆ.

**ಆ) ವಿಷಯ:** ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ಜಮೀನುಗಳನ್ನು ಅರಣ್ಯ ಇಲಾಖೆ ಮತ್ತು ಗೋಮಾಳ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ತೀರ್ಮಾನ ಮಾಡಿರುವುದು ಹಾಗೂ ಕೆಲವು ಜಮೀನುಗಳಿಗೆ ಹಕ್ಕು